- - ಅಸಲು ದಾವೆ ಸಂ**: 78/2022** ಡಿ.ಡಬ್ಲು**-4**

ದಿ**: 28-03-2026** **ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ವಿ ಡಿ ಸಿ ವಕೀಲರಿಂದ: -**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ. ನನ್ನ ತಂದೆಯ ಹೆಸರು ರಂಗಯ್ಯ. ನನ್ನ ತಂದೆಗೆ ಇಬ್ಬರು ಹೆಂಡತಿರು ಇರುತ್ತಾರೆ ಅವರ ಹೆಸರು ಯಂಕಮ್ಮ ಮತ್ತು ಅಂಬ್ರಮ್ಮ ಅಂತಾ ಇರುತ್ತದೆ. ಯಂಕಮ್ಮ ಎಂದರೆ ಈ ದಾವೆಯ 1ನೇ ಪ್ರತಿವಾದಿಯಾಗಿರುತ್ತಾರೆ. ನನ್ನ ತಂದೆ ತಾಯಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗನಿರುತ್ತಾನೆ. ನನ್ನನ್ನು ಜಿ ಇರಬಗೇರಾ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ಯಂಕಮ್ಮಳಿಗೆ ಮಕ್ಕಳಾಗಿರುವುದಿಲ್ಲ. 2ನೇ ಹೆಂಡತಿ ಅಂಬ್ರಮ್ಮಳಿಗೆ ನಾವು ಒಟ್ಟು 6

ಜನ ಮಕ್ಕಳಿರುತ್ತೇವೆ. ನನ್ನ ಹಿರಿಯ ತಾಯಿ ಯಂಕಮ್ಮಳ ತಂದೆ ತಾಯಿ ವಂಶವಾಳಿ ನನಗೆ ಹೇಳಲು ಬರುತ್ತದೆ. ವೆಂಕಟಗಿರಿ ತಂದೆಯ ಹೆಸರು ಹನುಮಯ್ಯ, ಹನುಮಯ್ಯನಿಗೆ 03 ಜನ ಮಕ್ಕಳಿರುತ್ತಾರೆ ಅವರ ಹೆಸರು ನಾಗಪ್ಪ, ವೆಂಕಟಗಿರಿ ಮತ್ತು ಹನುಮಯ್ಯ . ವೆಂಕಟಗಿರಿಗೆ ಒಬ್ಬಾಕೆ ಹೆಣ್ಣು ಮಗಳಿರುತ್ತಾಳೆ ಆಕೆಯ ಹೆಸರು ಯಂಕಮ್ಮ ಅಂತಾ ಇರುತ್ತದೆ. ನಾಗಪ್ಪನಿಗೆ ಮಾನಶೆಯ್ಯ ಮತ್ತು ಶಿವರಾಯ ಇಬ್ಬರು ಮಕ್ಕಳಿರುತ್ತಾರೆ. ಮಾನಶೆಯ್ಯನಿಗೆ ಲಗ್ನವಾಗಿರುವುದಿಲ್ಲ. ಹನುಮಯ್ಯನಿಗೆ 03 ಜನ ಮಕ್ಕಳಿರುತ್ತಾರೆ ಅವರ ಹೆಸರು ಯಂಕಪ್ಪ, ರಂಗಯ್ಯ ಮತ್ತು ರಾಚಪ್ಪ ಅಂತಾ ಇರುತ್ತದೆ. ಹನುಮಯ್ಯನಿಗೆ ನಾಗಪ್ಪ ಮತ್ತು ವೆಂಕಟಗಿರಿ ಇಬ್ಬರೆ ಮಕ್ಕಳಿದ್ದು ಹನುಮಯ್ಯ ಎನ್ನುವ 3 ನೇ ಮಗ ಇರುವುದಿಲ್ಲ ಎಂದರೆ ಸರಿಯಲ್ಲ.

2. ವೆಂಕಟಗಿರಿ ಹೆಂಡತಿಯ ಹೆಸರು ಭೀಮವ್ವ. ಭಿಮವ್ವ ಮತ್ತು ಯಂಕಮ್ಮ ತಾಯಿ ಮಗಳು ಒಂದೇ ಕಡೆ ಸಂಸಾರ ಮಾಡುತ್ತಿದ್ದರು ಎಂದರೆ ಸರಿ. ನಾಗಪ್ಪ ಮತ್ತು ವೆಂಕಟಗಿರಿ ಇವರು ದಾವಾ ಆಸ್ತಿಯನ್ನು ಕೂಡಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ . ನೀವು ದಾವಾ ಆಸ್ತಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭೀಮವ್ವ ತೀರಿಕೊಂಡು 16 ವರ್ಷ ಆಗಿರುತ್ತದೆ. ಯಂಕಮ್ಮ ಒಬ್ಬಾಕೆ ಇರುವುದರಿಂದ ಈಗ ನನ್ನ ಜೊತೆ ವಾಸ ಮಾಡಿಕೊಂಡಿದ್ದಾಳೆ. ದಾವಾ ಆಸ್ತಿಗಳಿಂದ ನಿಮ್ಮ ತಂದೆ ತಾಯಿ ಆಸ್ತಿಗಳು ಎಷ್ಟು ದೂರ ಇವೆ ಎಂದರೆ ಸಾಕ್ಷಿಯು 3 ಹೊಲ ದಾಟಿದ ನಂತರ ಇರುತ್ತವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಒಂದೇ ಸರ್ವೆ ನಂಬರ್‌ನಲ್ಲಿ ಹನುಮಯ್ಯನಿಗೆ, ನಿಮಗೆ ಮತ್ತು ವಾದಿಯರಿಗೆ ಸೇರಿದ ಪಟ್ಟಿಗಳು ಹೊಂದಿಕೊಂಡಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಪಹಣಿಗಳು ಮಾತ್ರ ಯಂಕಮ್ಮಳ ಹೆಸರಿನಲ್ಲಿದ್ದವು. ನೀವು ತಹಶೀಲ್ದಾರ ದೇವದುರ್ಗ ರವರಿಗೆ ಪಹಣಿ ವರ್ಗಾವಣೆ ಮಾಡಲು ಅರ್ಜಿ ಕೊಟ್ಟಿದ್ದು ಅದಕ್ಕೆ ವಾದಿಯರು ತಕರಾರು ಮಾಡಿದ್ದು, ಆಗ ಪಹಣಿ ಯಥಾಸ್ಥಿತಿಯಲ್ಲಿಡಬೇಕೆಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನಂತರ ಮೇಲ್ಮನವಿಯನ್ನು ಸಲ್ಲಿಸಿದ ನಂತರ ನನ್ನ ಹೆಸರಿಗೆ ಪಹಣಿ ವರ್ಗಾವಣೆ ಆಗಿರುತ್ತದೆ. ಮೇಲ್ಮನವಿ ಅರ್ಜಿ ತಿರಸ್ಕಾರ ಆಗಿದ್ದು ನಿಮ್ಮ ಹೆಸರಿಗೆ ಪಹಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೇಲ್ಮನವಿ ತಿರಸ್ಕಾರ ಆದ ನಂತರ ಯಂಕಮ್ಮಳಿಗೆ ಪ್ರತಿಫಲ ಹಣವನ್ನು ನೀಡದೇ ಕ್ರಯಪತ್ರವನ್ನು ನಿಮಗೆ ಬರೆದುಕೊಟ್ಟ

ಹಾಗೆ ಮಾಡಿಸಿಕೊಂಡು ಪಹಣಿ ನಿಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಯಂಕಮ್ಮ ನನಗೆ ಖರೀದಿ ಪತ್ರ ಬರೆದುಕೊಟ್ಟಿರುತ್ತಾಳೆ ಎನ್ನುತ್ತಾರೆ. ಕ್ರಯಪತ್ರ ಆದ ನಂತರ ಜೆ ಫಾರಂ ತಹಶೀಲ್ದಾರ ದೇವದುರ್ಗ ರವರಿಗೆ ಹೋಗಿದ್ದು ವಾದಿಯರು ಅದಕ್ಕೆ ತಕರಾರು ಮಾಡಿದ್ದು ಅದಕ್ಕೆ ದೇವದುರ್ಗ ತಹಶೀಲ್ದಾರ ನಿಮ್ಮ ಹೆಸರಿಗೆ ವರ್ಗಾವಣೆ ಮಾಡಿಲ್ಲ ಎಂದರೆ ಸರಿ. ಮೇಲ್ಮನವಿ ಅರ್ಜಿಯನ್ನು ಎ ಸಿ ನ್ಯಾಯಾಲಯ ರಾಯಚೂರು ಇವರಲ್ಲಿ ಸಲ್ಲಿಸಿದ್ದು ಅವರು ಮೇಲ್ಮನವಿ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪಹಣಿ ನನ್ನ ಹೆಸರಿಗೆ ಆಗಿದೆ ಎನ್ನುತ್ತಾರೆ. ಸದರಿ ಆದೇಶದ ವಿರುದ್ದ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರಲ್ಲಿ ಪಹಣಿ ಬದಲು ಮಾಡಲು ರಿವಿಜನ್ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸರಿ. ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಆದೇಶದ ಪ್ರಕಾರ ನಿಮ್ಮ ಹೆಸರಿಗೆ ಪಹಣಿ ಆಗಿದೆ ಎಂದರೆ ಸರಿ. ದಾವಾ ಜಮೀನಿನ ಪಹಣಿ ಮಾತ್ರ ನಿಮ್ಮ ಹೆಸರಿಗೆ ಆಗಿದ್ದು ವಾದಿಯರು ಅದರ ಕಬ್ಜಾದಲ್ಲಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ನಾನೇ ಕಬ್ಜಾದಲ್ಲಿದ್ದೇನೆ ಎನ್ನುತ್ತಾರೆ.

3. ವಾದಿಯರು ನನ್ನ ತಂದೆಗೆ ಸಂಬಂಧದಲ್ಲಿ ಬೀಗರಾಗಿರುತ್ತಾರೆ. ದಾವಾ ಜಮೀನು 00-20 ಗುಂಟೆಯ ಚಕ್ ಬಂದಿ ಪೂರ್ವ ಕ್ಕೆ ರಂಗಯ್ಯನ ಹೊಲ, ಪಶ್ಚಿಮಕ್ಕೆ ಹನುಮಯ್ಯನ ಹೊಲ ಇರುತ್ತದೆ, ಉತ್ತರಕ್ಕೆ ಹನುಮಯ್ಯ ಹೊಲ, ದಕ್ಷಿಣ ದಿಕ್ಕಿಗೆ ಗುಡ್ಡ ಇದೆ. ಪೂರ್ವ ದಿಕ್ಕಿಗೆ ಹೊಂದಿಕೊಂಡು ವೆಂಕೋಬನ ಹೊಲ ಇದೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ಹೊಂದಿಕೊಂಡು ನಾಗಮ್ಮನ ಹೊಲ ಇದೆ ಎಂದರೆ ಸರಿ, ಉತ್ತರ ದಿಕ್ಕಿಗೆ ತಿರುಮಲಯ್ಯನ ಹೊಲ ಇದೆ ಎಂದರೆ ಸರಿ, ದಕ್ಷಿಣ ದಿಕ್ಕಿಗೆ ವಾದಿ ಹನುಮಂತಿ ಇವರ ಹೊಲ ಇದೆ ಎಂದರೆ ಸರಿ. ನೀವು ಮೇಲೆ ಹೇಳಿದ ಚಕ್ ಬಂದಿ ಸುಳ್ಳಾಗಿರುತ್ತದೆ ಎಂದರೆ ಸಾಕ್ಷಿಯು ಈಗ ಹೇಳಿರುವುದು 20 ಗುಂಟೆ ಜಮೀನಿನದು, ಮೊದಲು ಹೇಳಿರುವುದು 14 ಗುಂಟೆ ಜಮೀನಿನ ಚಕ್ ಬಂದಿ ಎಂದು ಹೇಳುತ್ತಾರೆ. ಡಿ ಬ್ಲು-2 ಹನುಮಯ್ಯ ತಂದೆ ಯಂಕಯ್ಯ ನನ್ನ ಗಂಡನಾಗಿರುತ್ತಾನೆ. ನೀವು ವಾದಿಯರಿಗೆ ಸೇರಿದ ಜಮೀನಿನನ್ನು ಕಬಳಿಸಬೇಕೆಂದು ಅನ್ಯಾಯ ಮಾಡಿರುವುದರಿಂದ ನಿಮ್ಮ ಪರವಾಗಿ ಸಾಕ್ಷಿ

ನುಡಿಯಲು ಊರಿನವರು ಯಾರು ಬಂದಿಲ್ಲ ನೀವು ಗಂಡ ಹೆಂಡತಿ ಬಂದಿದ್ದೀರಿ ಎಂದರೆ ಸರಿಯಲ್ಲ. ಯಂಕಮ್ಮಳಿಗೆ ವಯಸ್ಸಾಗಿದ್ದು, ಆಕೆಗೆ ಏನೂ ಗೊತ್ತಾಗುವುದಿಲ್ಲ ಎಂದು ಸುಳ್ಳು ಖರೀದಿ ಪತ್ರ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಯಂಕಮ್ಮಳ ಭಾಗಕ್ಕೆ ಬರಬೇಕಾದ ಆಸ್ತಿಯನ್ನು ನೀವು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಯಂಕಮ್ಮಳಿಗೆ ನೀವು ಸ್ವಂತ ಮಗಳಾಗಿರುವುದಿಲ್ಲ ಎಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ. ನೀವು ಯಂಕಮ್ಮಳ ತಂದೆಯ ಕುಟುಂಬಕ್ಕೆ ವಾರಸುದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಖರೀದಿ ಪತ್ರ ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ